Dr. R. NAGAN GOWDA.—I am sorry, Sir, I cannot give the number just now.

ಶ್ರೀ ಬಿ. ಹುಚ್ಚೇಗೌಡ.—ಪರಿಶಿಷ್ಟದ 3ನೆ ಐಟಂನಲ್ಲಿ restoration of major and minor tanks ಎಂಬ ಯೋಜನೆ ಪ್ರಕಾರ ನುಮಾರು 31 ಸಾವಿರ ಎಕರೆ ಸಾಗಿಗೆ ಬಂದಿದೆಯೆಂದು ಹೇಳಿದೆ. ಅದು ಹೊಸದೋ ಅಥವಾ ಹಳೆಯದೋ?

Dr. R. NAGAN GOWDA.—I want notice.

ಶ್ರೀ ಬಿ. ಹುಚ್ಚೇಗೌಡ.—ಪರಿಶಿಷ್ಟದ 13ನೆಯ ಐಟಂನಲ್ಲಿ ನುಮಾರು 3,26,000 ಎಕರೆ ಜಮೀನನ್ನು ವಿಲೇಮಾಡಿದೆಯೆಂದು ಹೇಳಿರುವುದು 1949-50ರಲ್ಲಿ ದ್ದುದಕ್ಕಿಂತ ಹೆಚ್ಚಾಗಿ ಸಾಗುವಳಿಗೆ ಬಂದಿರುವ ಪ್ರದೇಶವೆ?

Dr. R. NAGAN GOWDA.—I think so, Sir.

ಶ್ರೀ ಬಿ. ಹುಚ್ಚೇಗೌಡ.—ಈ ಅಂಕಿಅಂಶಗಳನ್ನು ಪರಿಶೀಲಿಸಿ ನೋಡಿದರೆ ಸರ್ಕಾರದವರಿಗೆ ಸಂಸ್ಥಾನದಲ್ಲಿ ಸಾಗುವಳಿ ಜಾಸ್ತಿಯಾಗಿದೆಯೆಂದು ತೋರುತ್ತದೆಯೇ ಅಥವಾ ಕಡಿಮೆಯಾಗಿದೆಯೆಂದು ತೋರುತ್ತದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಜಾಸ್ತಿಯಾಗಿದೆ.

ಶ್ರೀ ಎಸ್. ಎಂ. ಮರಿಯಪ್ಪ.—ಬುಲ್‌ಡೋಜರ್ ಸ್ಕೀಂ ಸಂಸ್ಥಾನದಲ್ಲಿ ಸಮರ್ಪಕವಾಗಿ ಕೆಲಸಮಾಡುತ್ತಿದೆಯೇ?

ಡಾ॥ ಆರ್. ನಾಗನಗೌಡ.—ಹೌದು.

ಶ್ರೀ ಎಸ್. ಎಂ. ಮರಿಯಪ್ಪ.—ಈಗ ಈ ಸ್ಕೀಂ ತೆಗೆದಮೇಲೆ ಬೇರೆ ಯಾವುದನ್ನು ಜಾರಿಗೆ ತಂದಿದ್ದೀರಿ?

ಅಧ್ಯಕ್ಷರು.—ಅದನ್ನು ಇನ್ನೂ ತೆಗೆದುಹಾಕಿಲ್ಲ.

ಶ್ರೀ ಎಸ್. ಎಂ. ಮರಿಯಪ್ಪ.—ಈ ಬುಲ್ ಡೋಜರ್ ದಿವಸಕ್ಕೆ ಎಷ್ಟು ಗಂಟೆ ಕಾಲ ಕೆಲಸಮಾಡ ಬೇಕೆಂದು ನಿರ್ಧರಿಸಿದ್ದೀರಿ?

Mr. SPEAKER.—They are all details. The Hon'ble Member need not refer to them.

Channapatna-Daswara-Makaly Road and Channapatna-Iggalur Road

Q.—776. Sri V. VENKATAPPA (Channapatna).—

Will the Government be pleased to state:—

(*a*) whether repeated representations have not been made to them about the utter inadequacy of roads in Channapatna Taluk both on the floor of this House and elsewhere;

(*b*) whether it is not a fact that the present Minister for Public Works, during his tour in Channapatna Taluk last year, promised to take up at least two roads, *viz.*, Channapatna-Daswara-Makaly Road and Channapatna-Iggalur Road, immediately;

(*c*) if so, the action taken so far in this regard and when they propose to take necessary action?

A.—Sri Kadidal MANJAPPA (Minister for Revenue and Public Works).—

(*a*) Yes.

(*b*) The Minister for Revenue during his tour in this taluk had instructed the local officers to take up the two roads as distress relief works.

(*c*) The Special Officer, District Board, Bangalore, will be asked to take up the two road works out of the District Board funds.

ಶ್ರೀ ವಿ. ವೆಂಕಟಪ್ಪ.—ಇದಕ್ಕೆ ಸಂಬಂಧಪಟ್ಟ ಹಾಗೆ ಇನ್ನೊಂದು ಪ್ರಶ್ನೆಗೆ ಇಲ್ಲಿ ಕೆಲವು ರಸ್ತೆಗಳನ್ನು ತೆಗೆದು ಕೊಳ್ಳುವ ವ್ಯವಸ್ಥೆ ಮಾಡಲಾಗಿದೆಯೆಂದು ಹೇಳಿದೀರಿ. ಅವುಗಳನ್ನು ಡಿಸ್ಟ್ರಿಕ್ಟ್ ಬೋರ್ಡ್ ಮೂಲಕ ಏರ್ಪಡಿಸುತ್ತೀರಾ ಅಥವಾ ಪಬ್ಲಿಕ್ ವರ್ಕ್ಸ್ ಇಲಾಖೆಯ ಮೂಲಕ ಏರ್ಪಡಿಸುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಡಿಸ್ಟ್ರಿಕ್ಟ್ ಬೋರ್ಡ್ ಮೂಲಕ ತೆಗೆದುಕೊಳ್ಳಬೇಕೆಂದು ಇದ್ದೇವೆ.

ಶ್ರೀ ವಿ. ವೆಂಕಟಪ್ಪ.—ಡಿಸ್ಟ್ರಿಕ್ಟ್ ಬೋರ್ಡ್‌ನಲ್ಲಿ ದುಡ್ಡಿಲ್ಲ ಎಂಬುದು ಗೊತ್ತೆ?

ಶ್ರೀ ಕಡಿದಾಳ್ ಮಂಜಪ್ಪ.—ಈ ವರ್ಷ ಆ ಕೆಲಸ ತೆಗೆದುಕೊಳ್ಳುತ್ತಾರೆ.

ಶ್ರೀ ವಿ. ವೆಂಕಟಪ್ಪ.—ಕೆಲಸ ನಿರ್ವಹಿಸಲು ಅವರಲ್ಲಿ ದುಡ್ಡಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಇದೆ.

ಶ್ರೀ ವಿ. ವೆಂಕಟಪ್ಪ.—ಕೆಲಸ ಎಷ್ಟು ತೆಗೆದು ಕೊಳ್ಳುತ್ತಾರೆ?

ಶ್ರೀ ಕಡಿದಾಳ್ ಮಂಜಪ್ಪ.—ಎರಡು ರಸ್ತೆಗಳ ಕೆಲಸ ತೆಗೆದುಕೊಳ್ಳುತ್ತಾರೆ.

ಶ್ರೀ ವಿ. ವೆಂಕಟಪ್ಪ.—ಪೂರ್ತಿ ತೆಗೆದುಕೊಳ್ಳುತ್ತಾರೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ನಮ್ಮ ಉದ್ದೇಶ, ಎರಡು ರಸ್ತೆಗಳ ಕೆಲಸವನ್ನೂ ಪೂರ್ತಿಯಾಗಿ ತೆಗೆದು ಕೊಳ್ಳಬೇಕೆಂದು. ನೋಡಬೇಕು.

Land Revenue in Kolar District (Remission)

Q.—971. Sri A. MUNIYAPPA (Sidlaghatta-Chickballapur—Scheduled Castes).—

Will the Government be pleased to state:—

(*a*) whether it has come to their notice that the land revenue of the previous year is now being collected in respect of the famine stricken area as in Kolar District;

(SRI A. MUNIYAPPA.)

(*b*) whether any representations have been received praying for the remission of wet and dry assessment of the previous year due to the then prevailing famine conditions ?

A.—Sri Kadidal MANJAPPA (Minister for Revenue and Public Works).—

(*a*) Yes.

(*b*) Yes.

ಶ್ರೀ ಎ. ಮುನಿಯಪ್ಪ.—ಕೋಲಾರ ಜಿಲ್ಲೆಯಿಂದ ತರೀ ಮತ್ತು ಬಾಗಾಯಿತು ಕಂದಾಯದ ವನೂಲು ಬಗ್ಗೆ ಹಿಂದಿನ ವರ್ಷಕ್ಕೆ ರೆಮಿಷ್ ಕೇಳುವ ಮನವಿ ನಲ್ಲಿಸಿದ್ದಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಕಳುಹಿಸಿದ್ದಾರೆ.

ಶ್ರೀ ಎ. ಮುನಿಯಪ್ಪ.—ಅಲ್ಲಿ ಈ ತೊಂದರೆಗೆ ಒಳಗಾಗಿರುವ ಪ್ರತಿ ತಾಲ್ಲೂಕಿನ ರೈತರನ್ನೊಳಗೊಂಡ ನಿಯೋಗ ಬಂದಿತ್ತೆ ?

ಶ್ರೀ ಕಡಿದಾಳ್ ಮಂಜಪ್ಪ.—ಪ್ರತಿಯೊಂದು ಭಾಗದಿಂದಲೂ ಬಂದಿಲ್ಲ.

ಶ್ರೀ ಎ. ಮುನಿಯಪ್ಪ.—ಕೆಲವರು ಬಂದು ಕೋಲಾರ ಜಿಲ್ಲೆಯ ಕೆಲವು ತಾಲ್ಲೂಕುಗಳಲ್ಲಿ ಕಂದಾಯವನ್ನು ಜುಲುಂನಿಂದ ವನೂಲು ಮಾಡುತ್ತಾ ಇರುವ ಅಂತೆ ವನ್ನು ತಮ್ಮ ಗಮನಕ್ಕೆ ತಂದಿರುತ್ತಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

MR. SPEAKER.—Question No. 290. The Member is not here.

SRI H. SIDDAVEERAPPA.—Firstly in regard to question No. 290, though no question is put.....

MR. SPEAKER.—It becomes a precedent. During the absence of the Member if it is allowed then others will take advantage.

SRI H. SIDDAVEERAPPA.—There was some clerical mistake in the answer.

MR. SPEAKER.—I thought you are making a statement.

SRI H. SIDDAVEERAPPA.—No, I am not. With regard to authorised capital, the figures that are given there, are for the year in which the company was floated. Today the authorised capital is Rs. 10 lakhs and the paid up capital is Rs. 8,77,790. That is what I wanted to state.

MR. SPEAKER.—The correction will be made.

SRI H. SIDDAVEERAPPA.—The question is not put, because the Member is absent.

Exempted Routes for Madras State passenger buses.

Q.—412. SRI MALI MARIYAPPA (Pavagada).—

Will the Government be pleased to state :—

(*a*) the various routes in Mysore State which are called exempted routes for Madras State passenger buses ;

(*b*) the extent of each such exempted route ;

(*c*) reciprocally what are the routes in Madras State where Mysore State passenger buses enjoy the benefit of exemption ;

(*d*) the extent of each such exempted route (while answering Madras may be taken to include Andhra also) ?

A.—Sri H. SIDDAVEERAPPA (Minister for Home and Industries).—

(*a*) 1. Hindupur-Kalyandurga *via* Pavagada and Y. N. Hoskote.

2. Amarapura - Hindupur *via* Pavagada and Penukonda.

3. Madakasira-Penukonda *via* Dommathamari.

4. Bellary-Penukonda.

(*b*) 1. Hindupur-Kalyandurga *via* Pavagada and Y. N. Hoskote (32 miles)

2. Amarapura-Hindupur *via* Pavagada and Penukonda (20 miles).

3. Madakasira-Penukonda *via* Dommathamari (2 miles).

4. Bellary-Penukonda (12miles)

(*c*) 1. Madhugiri-Y. N. Hoskote *via* Madakasira and Pavagada.

2. Sira-Pavagada *via* Amarapura.

(*d*) 1. Madhugiri-Y. N. Hoskote *via* Madakasira and Pavagada (9 miles).

2. Sira-Pavagada *via* Amarapura (5 miles).

ಶ್ರೀ ಮಾಲಿ ಮರಿಯಪ್ಪ.—ಈ ವಿಚಾರದಲ್ಲಿ ಮದ್ರಾಸ್ ಸರ್ಕಾರಕ್ಕೂ ನಮ್ಮ ಸರ್ಕಾರಕ್ಕೂ ಒಪ್ಪಂದ ನಡೆದಿದೆಯೇ ?

ಶ್ರೀ ಎಚ್. ಸಿದ್ಧವೀರಪ್ಪ.—ಯಾವ ವಿಚಾರದಲ್ಲಿ ?